ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 5, Mar-Apr, 2023, Pp. 17-28.**
**©*IIMRD*, Mysuru**

IIMRD JOURNALS

**www.iimrd.com**

# ಕರ್ನಾಟಕದಲ್ಲಿ ಕೃಷಿ ವಾಣಿಜ್ಯ ಬೆಳೆಗಳು ಮತ್ತು ವಹಿವಾಟು

**ಮಾನಸ. ಎ. ಕೆ***

*ಸಂಶೋಧಕರು, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

***ಸಾರಾಂಶ:(Abstract)***

*ಕರ್ನಾಟಕದಲ್ಲಿ ವಾಣಿಜ್ಯ ಬೆಳೆಗಳ ಉತ್ಪಾದನೆಯ ಬೆಳವಣಿಗೆಯಲ್ಲಿ ಕೃಷಿಯು ಪ್ರಮುಖ ಪಾತ್ರವಹಿಸುತ್ತದೆ. ಇಲ್ಲಿನ ಮಣ್ಣು ಮತ್ತು ಹವಮಾನವು ಪರಿಸ್ಥಿತಿಯು ಸಹ ಕೃಷಿಗೆ ಸಹಕಾರಿಯಾಗಿದೆ. ರಾಜ್ಯದ ಗ್ರಾಮೀಣ ಭಾಗದ ಜನರು ಹೆಚ್ಚು ಕೃಷಿಯನ್ನೇ ಅವಲಂಬಿಸಿದ್ದು, ಅವರ ಮುಖ್ಯ ಜೀವನೋಪಾಯ ಮತ್ತು ಆರ್ಥಿಕತೆಯು ಕೃಷಿಯ ಮೇಲೆಯೇ ಅವಲಂಬನೆಯಾಗಿದ್ದಾರೆ ಮತ್ತು ಬಹಳ ಮುಖ್ಯವಾಗಿ ಬೆಳೆಯುವಂತಹ ವಾಣಿಜ್ಯ ಬೆಳೆಗಳು ಅಂದರೆ ಕಬ್ಬು, ಹತ್ತಿ, ತಂಬಾಕು, ಕಾಫಿ, ರಬ್ಬರ್, ಮೆಕ್ಕೆಜೋಳ, ಒಣ ಮೆಣಸಿನಕಾಯಿ, ತೆಂಗಿನಕಾಯಿ, ಅಡಿಕೆ, ಏಲಕ್ಕಿ, ಮೆಣಸು, ಸೂರ್ಯಕಾಂತಿ, ಮಾವಿನ ಹಣ್ಣು, ತೆಂಗು ಮುಂತಾದವು ಆಗಿದೆ. ಸರ್ಕಾರವು ಸಹ ಮೊದಲನೆ ಪಂಚವಾರ್ಷಿಕ ಯೋಜನೆಯಿಂದ ಪ್ರಸ್ತುತ ಯೋಜನೆಗಳವರೆಗು ಕೃಷಿಗೆ ಪ್ರತಿಕೂಲಕರವಾಗುವಂತಹ ಯೋಜನೆಗಳನ್ನು ರೂಪಿಸುತ್ತಿದೆ ಅಷ್ಟಾಗಿಯು ರಾಜ್ಯದಲ್ಲಿ ಕೃಷಿಕರು ಹಲವು ಸಮಸ್ಯೆಗಳನ್ನು ಎದುರಿಸುತ್ತಲೆ ಇರುತ್ತಿದ್ದಾರೆ.*

***ಮುಖ್ಯಪದಗಳು (Keywords)*** *ವಾಣಿಜ್ಯ, ಬೆಳೆ, ವಹಿವಾಟು, ಕೃಷಿ, ಪಂಚವಾರ್ಷಿಕ ಯೋಜನೆ.*

## ಪೀಠಿಕೆ

ದೇಶದ ಆರ್ಥಿಕತೆಯಂತೆ ಕರ್ನಾಟಕದ ಆರ್ಥಿಕತೆಯು ಕೂಡ ಕೃಷಿ ಪ್ರಧಾನವಾದುದ್ದು. ೨೦೧೧ರ ಜನಗಣತಿಯ ಪ್ರಕಾರ ಕೃಷಿ ೧೩.೭೪ ದಶಲಕ್ಷ ಕಾರ್ಮಿಕರಿಗೆ ಬೆಂಬಲದಾಯಕವಾಗಿದ್ದು ಅವರ ಪೈಕಿ ಶೇ.೨೩.೬೧ ರಷ್ಟು ಜನರು ಕೃಷಿಕರಾಗಿದ್ದಾರೆ. ಕೃಷಿ ಮತ್ತು ಸಂಭಂದಿತ ವಲಯದಲ್ಲಿನ ಉದ್ಯೋಗದ ಬೆಳವಣಿಗೆಯಲ್ಲಿ ೨೦೧೧–೧೮ರವರೆಗೆ ೧.೯೩%ರಷ್ಟದ್ದ ದರ ೨೦೧೮–೨೦ರವರೆಗೆ ೨೨.೭೦ರಷ್ಟಾಗಿದೆ ಅಂದರೆ ೨೨.೫೦೭ರಷ್ಟು ಭಾರಿ ಏರಿಕೆಯನ್ನು ಕಂಡಿದೆ. ಭೌಗೋಳಿಕ ವಿಸ್ತೀರ್ಣದಲ್ಲಿ ಕರ್ನಾಟಕ ರಾಜ್ಯವು ಭಾರತದಲ್ಲಿ ಎಂಟನೆಯ ಸ್ಥಾನ ಪಡೆದಿರುವ ವಿಶಾಲವಾದ ರಾಜ್ಯ. ಇದರ ವಿಸ್ತೀರ್ಣ ೧,೯೧,೭೯೧ ಚ.ಕಿ.ಮೀ. ಭಾರತದ ಒಟ್ಟು ವಿಸ್ತೀರ್ಣದಲ್ಲಿ ಕರ್ನಾಟಕದ ಪಾಲು ಶೇ.೭.೭೫. ೨೦೧೧–೧೨ರಲ್ಲಿ ಭಾರತ ಮತ್ತು ಕರ್ನಾಟಕ ಕೃಷಿ ವಲಯವು ಜಿ.ವಿ.ಓ.ಗೆ (Gross value of output) ಶೇ.೪೩ರಷ್ಟು ಕೊಡುಗೆ ನೀಡಿದ್ದಾರೆ. ರಾಜ್ಯದ ಸಾಗುವಳಿಯ ಭೂಮಿಯು ೬೪.೬% ಇದ್ದು, ಅದರಲ್ಲಿ ನೀರಾವರಿಯು ೨೬.೫ರಷ್ಟಿದೆ.[1] ಇದು ದಕ್ಷಿಣದ ಪ್ರಸ್ತ ಭೂಮಿಯ ಪಶ್ಚಿಮ ಭಾಗದಲ್ಲಿದ್ದು ೧೧.೫ ಮತ್ತು ೧೮.೫ ಉತ್ತರ

[1] ಕರ್ನಾಟಕದ ಆರ್ಥಿಕ ಸಮೀಕ್ಷೆ ೨೦೨೧–೨೨ರ ಮುಖ್ಯಂಶಗಳು ಪು.ಸ ೧೭.

*Please cite this article as: ಮಾನಸ. ಎ. ಕೆ.* (2023). ಕರ್ನಾಟಕದಲ್ಲಿ ಕೃಷಿ ವಾಣಿಜ್ಯ ಬೆಳೆಗಳು ಮತ್ತು ವಹಿವಾಟು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(5). ಪು.ಸಂ. 17–28.*

ಅಕ್ಷಾಂಶ ಹಾಗು ೭೪ ಮತ್ತು ೭೮.೫ ಪೂರ್ವ ರೇಖಾಂಶಗಳ ಮಧ್ಯೆ ನೆಲೆಗೊಂಡಿದೆ. ರಾಜ್ಯದ ಉತ್ತರಕ್ಕೆ ಮಹಾರಾಷ್ಟ್ರ, ದಕ್ಷಿಣಕ್ಕೆ ಕೇರಳ ಮತ್ತು ತಮಿಳುನಾಡು, ಪಶ್ಚಿಮಕ್ಕೆ ಅರಬ್ಬಿ ಸಮುದ್ರ, ವಾಯುವ್ಯಕ್ಕೆ ಗೋವಾ ಮತ್ತು ಪೂರ್ವಕ್ಕೆ ಆಂಧ್ರ ಪ್ರದೇಶವಿದೆ. ಇದು ಪೂರ್ವದಿಂದ ಪಶ್ಚಿಮಕ್ಕೆ ೪೦೦ ಕಿ.ಮೀ. ಹಾಗೂ ಉತ್ತರದಿಂದ ದಕ್ಷಿಣಕ್ಕೆ ೭೦೦ ಕಿ.ಮೀ. ವರೆಗೆ ವ್ಯಾಪಿಸಿದೆ.

ಕರ್ನಾಟಕ ರಾಜ್ಯ ಸುಮಾರು ೨೯,೪೮೩ ಗ್ರಾಮ, ೩೨ ಜಿಲ್ಲೆಗಳು, ೨೨೭ ತಾಲೂಕುಗಳನ್ನು ಒಳಗೊಂಡಿದೆ. ಅತೀ ಹೆಚ್ಚಿನ ಸಂಖ್ಯೆಯ ಗ್ರಾಮಗಳಿರುವುದರಿಂದ ಕರ್ನಾಟಕವನ್ನು ಪ್ರಧಾನವಾಗಿ ಒಂದು ಗ್ರಾಮೀಣ ಅರ್ಥವ್ಯವಸ್ಥೆಯೆಂದು ಕರೆಯಲಾಗಿದೆ[೨] ಈ ರಾಜ್ಯದ ದುಡಿಯುವ ಒಟ್ಟು ಜನರಲ್ಲಿ ಶೇ.೨ ಕೃಷಿಕರು ಮತ್ತು ಕೃಷಿ ಕಾರ್ಮಿಕರು. ಆರ್ಥಿಕತೆಯೊಂದರ ವೃತ್ತಿರಚನೆ, ಬೆಳೆವಿಧಾನ, ಆದಾಯದ ವಿವಿಧ ಮೂಲಗಳು ಮೊದಲಾದ ವಿಚಾರಗಳು ಆರ್ಥಿಕತೆಯ ಸ್ವರೂಪವನ್ನು ತಿಳಿಸುತ್ತವೆ. ಕೃಷಿರಂಗವು ಕೈಗಾರಿಕೆ ಮತ್ತು ಸೇವಾರಂಗಗಳನ್ನು ಬಲಗೊಳಿಸುವ ಹಾಗೂ ಸುಸ್ಥಿರ ಅಭಿವೃದ್ಧಿಯನ್ನು ಉಂಟುಮಾಡುವ ಪ್ರಾಥಮಿಕ ರಂಗವಾಗಿದೆ. ಆದುದರಿಂದ ಆರ್ಥಿಕತೆಯಲ್ಲಿ ಕೃಷಿಗೆ ಬಹಳ ಮಹತ್ವವಿದೆ.

**ವಾಣಿಜ್ಯ ಕೃಷಿಯ ಅರ್ಥ**

ಆಧುನಿಕ ತಂತ್ರಜ್ಞಾನ ಬಳಿಸಿ ಲಾಭಗಳಿಕೆ ಉದ್ದೇಶದಿಂದ ಅತ್ಯಂತ ವ್ಯವಸ್ಥಿತವಾಗಿ ಕೃಷಿ ಉತ್ಪಾದನೆಯನ್ನು ಮಾಡಿ ಮತ್ತು ಕೃಷಿ ಉತ್ಪನ್ನ ಮಾರಾಟ ಕೈಗೊಳ್ಳುವ ಪ್ರಯತ್ನಗಳನ್ನು ಕೃಷಿ ವಾಣಿಜ್ಯೀಕರಣ ಎನ್ನಲಾಗುವುದು.' "ವಾಣಿಜ್ಯ ಕೃಷಿ ಎಂದರೆ ಮಾರಾಟ ಮಾಡುವ ಉದ್ದೇಶದಿಂದ ರೈತನು ಬೆಳೆದ ಬೆಳೆಯಾಗಿದೆ." ವಿಸ್ತಾರವಾಗಿ ಹೇಳುವುದಾದರೆ ವಾಣಿಜ್ಯ ಕೃಷಿ ಎನ್ನುವುದು ಸಗಟು ವ್ಯಾಪಾರಿಗಳಿಗೆ ಅಥವಾ ಚಿಲ್ಲರೆ ಮಾರಾಟ ಮಳಿಗೆಗಳಿಗೆ ವ್ಯಾಪರಕ್ಕಾಗಿ ಬೆಳೆಯುವ ಬೆಳೆಗಳ ದೊಡ್ಡ ಪ್ರಮಾಣದ ಉತ್ಪಾದನೆಯಾಗಿದೆ. ವಾಣಿಜ್ಯ ಕೃಷಿಯ ಬೆಳೆಗಳಾದ ಮೆಕ್ಕೆಜೋಳ, ಚಹಾ–ಕಾಫಿ, ಕಬ್ಬು, ಗೋಡಂಬಿ, ರಬ್ಬರ್, ಬಾಳೆಹಣ್ಣು, ಹತ್ತಿ, ತಂಬಾಕು ಮುಂತಾದ ಬೆಳೆಗಳನ್ನು ಕೊಯ್ಲು ಮಾಡಿ ಸ್ಥಳೀಯವಾಗಿ, ತಾಲೂಕುವಾರು, ಜಿಲ್ಲಾವಾರು, ರಾಜ್ಯಾವಾರು, ರಾಷ್ಟೀಯವಾರುಗಳಲ್ಲಿ ಮತ್ತು ವಿಶ್ವ ಮಾರುಕಟ್ಟೆಯಲ್ಲಿ ಮಾರಾಟಮಾಡಲಾಗುತ್ತದೆ. ವಾಣಿಜ್ಯ ಕೃಷಿಯಲ್ಲಿ ಜಾನುವಾರು ಉತ್ಪಾದನೆ ಮತ್ತು ಜಾನುವಾರುಗಳ ಮೇಯಿಸುವಿಕೆ ಸೇರಿವೆ.

**ವಾಣಿಜ್ಯ ಕೃಷಿಯ ವ್ಯಾಖ್ಯಾನ**

ವಾಣಿಜ್ಯ ಕೃಷಿಯ ಬಗ್ಗೆ ಯುನೈಟೆಡ್ ಫ್ರೂಟ್ ಕಂಪನಿಯು ಒಂದು ವ್ಯಾಖ್ಯನವನ್ನು ಹೇಳಿದೆ. "ವಾಣಿಜ್ಯ ಕೃಷಿ ಸಾಮಾನ್ಯವಾಗಿ ಮುಂದುವರಿದ ಮತ್ತು ಮುಂದುವರಿಯುತ್ತಿರುವ ಕೈಗಾರಿಕೀಕರಣಗೊಂಡ ರಾಷ್ಟ್ರಗಳಲ್ಲಿ ಕಂಡುಬರುತ್ತದೆ. ಕೊಯ್ಲು ಮಾಡಿದ ಬೆಳೆಯನ್ನು ಸ್ಥಳದಲ್ಲೇ ಸಂಸ್ಕರಿಸುವುದು ಅಥವಾ ನಂತರ ವ್ಯಾಪಾರಿಗಳಿಗೆ ಸಂಪೂರ್ಣ ಉತ್ಪನ್ನವನ್ನು ಮಾರಾಟ ಮಾಡುವುದು ಮತ್ತು ಉತ್ಪನ್ನವನ್ನು ಬೇರೆಡೆ ಸಂಸ್ಕರಣೆ ಮಾಡಿ ಮಾರಾಟ ಮಾಡುವುದಕ್ಕೆ ವಾಣಿಜ್ಯ ಕೃಷಿ ಎನ್ನುವರು" ಎಂದು ತಿಳಿಸಿದೆ.

[೨] ಅದೇ ಪುಟ ೧೭

ಕೃಷಿಯು ಜನರಿಗೆ ಆಹಾರವನ್ನು ಬೆಳೆಯುತ್ತಿರುವ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಪೂರೈಸುವುದಾಗಿದೆ. ವಿಶ್ವದ ಜನರ ಜೀವನದಲ್ಲಿ ಕೃಷಿಯು ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಆದ್ದರಿಂದ, ಕೃಷಿಯನ್ನು ರಾಷ್ಟ್ರದ ಬೆನ್ನೆಲುಬು ಎಂದು ವರ್ಣಿಸಲಾಗಿದೆ. ಹಿಂದಿನ ದಿನಗಳಲ್ಲಿ ರೈತರಿಗೆ ಹೆಚ್ಚಿನ ಹಣದ ಅವಶ್ಯಕತೆಯಿರಲಿಲ್ಲ. ಆದಕಾರಣ ಹಣ ತರುವಂತಹ ಬೆಳೆಗಳನ್ನು ಬೆಳೆಯುವ ಯೋಚನೆಯಾಗಲಿ, ಯೋಜನೆಯಾಗಲಿ ಇರಲಿಲ್ಲ. ಹಳ್ಳಿಗಳಲ್ಲಿ ಬೆಳೆದಂತಹ ಉತ್ಪನ್ನವನ್ನು ತನ್ನ ಕುಟುಂಬದ ನಿರ್ವಹಣೆಗೆ ಮಾತ್ರ ಬಳಸಿಕೊಂಡು ಉಳಿದ ಅಲ್ಪ–ಸ್ವಲ್ಪ ಹೆಚ್ಚುವರಿ ಧಾನ್ಯಗಳನ್ನು ಹಳ್ಳಿಗಳಲ್ಲಿಯೇ ಅದಲು–ಬದಲು ಮಾಡಿಕೊಳ್ಳುವ ಮೂಲಕ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿದ್ದರು. ಹೀಗಾಗಿ, ಅಂದು ಕೃಷಿ ಉತ್ಪನ್ನಗಳ ಮಾರಾಟದ ಪ್ರಶ್ನೆಯೇ ಉದ್ಭವಿಸಲಿಲ್ಲ. ಇಂದಿನ ರೈತರು ಪ್ರಕೃತಿಯ ನಿಗೂಢವನ್ನು ತಿಳಿದಿರುವರು. ಅದೃಷ್ಟದ ಮೇಲೆ ಆರೋಪ ಹೊರಿಸಿ ಕೈ ಕಟ್ಟಿ ಕುಳಿತುಕೊಳ್ಳುವಂತಹ ಸೋಮಾರಿಗಳಲ್ಲ. ಕೃಷಿಯು ವಾಣಿಜ್ಯಕರಣವಾಗಿದೆ.

ರೈತನು ಸಹ ಒಬ್ಬ ಉತ್ಪಾದಕ. ರೈತರು ಯಾವ ರೀತಿ ಗರಿಷ್ಠ ಉತ್ಪಾದನೆ ಮಾಡಿ ಗರಿಷ್ಠ ಲಾಭ ಗಳಿಸಬೇಕು ಎಂದು ತಿಳಿಯುವುದು ಅಗತ್ಯವಾಗಿದೆ. ಇಂದು ನಮ್ಮ ಅರ್ಥವ್ಯವಸ್ಥೆಯಲ್ಲಿ ಕೃಷಿಗೆ ಮಹತ್ತರ ಸ್ಥಾನ ನೀಡಿದ್ದರೂ ಇದುವರಿಗೂ ಈ ಕ್ಷೇತ್ರದಲ್ಲಿ ಸಾಕಷ್ಟು ತೃಪ್ತಿಕರವಾದ ಬೆಳವಣಿಗೆಯನ್ನು ಹೊಂದಲಾಗಿಲ್ಲ. ಇದಕ್ಕೆ ಪ್ರಮುಖವಾದ ಕಾರಣ ರೈತರು ಇನ್ನು ಸಾಂಪ್ರದಾಯಕ ವಿಧಾನ ಅಥಾವ ಹಳೆಯ ವಿಧಾನವನ್ನು ಬಳಸಿಕೊಂಡು ಸಾಗುವಳಿಯನ್ನು ಮಾಡುತ್ತಿರುವುದು ಒಂದು ಪ್ರಮುಖ ಕಾರಣವಾದರೆ ಇನ್ನೊಂದು ರೈತರಿಗೆ ಲಾಭ ತರುವಂತಹ ವಾಣಿಜ್ಯ ಬೆಳೆಗಳನ್ನು ಬೆಳೆಯದೆಯೇ ಇರುವುದು. ಈ ಹಿನ್ನೆಲೆಯಲ್ಲಿ ಪ್ರಸ್ತುತವಾಗಿ, ವಾಣಿಜ್ಯ ಕೃಷಿಯ ಮಹತ್ವ, ಹಸಿರು ಮತ್ತು ಹೊಸ ಆರ್ಥಿಕ ನೀತಿಯ ನಂತರಲ್ಲಿ ಕೃಷಿಯಲ್ಲಿ ಆಗಿರುವಂತಹ ಬದಲಾವಣೆಗಳು, ಕೃಷಿ ಮಾರುಕಟ್ಟೆಯ ಸಮರ್ಪಕವಾದ ವ್ಯವಸ್ಥೆ, ಕೃಷಿ ಉತ್ಪನ್ನಗಳ ಬೆಲೆ ಮತ್ತು ಮಾರುಕಟ್ಟೆಗಳಲ್ಲಿನ ಅನಿಶ್ಚಿತತೆಯನ್ನು ತಗ್ಗಿಸಿ, ರೈತರ ಉತ್ಪನ್ನಗಳಿಗೆ ನ್ಯಾಯೋಚಿತವಾದ ಬೆಲೆ ದೊರೆಯುವಂತೆ ಮಾಡುವುದು ಮುಖ್ಯವಾದ ಉದ್ದೇಶವಾಗಿದೆ.

ವಾಣಿಜ್ಯ ಬೆಳೆಗಳ ಉತ್ಪಾದನೆ ಮತ್ತು ವಹಿವಾಟಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಯೋಜನೆಗಳನ್ನು ಜಾರಿಗೆ ತಂದಿವೆ. ಹೀಗಿದ್ದರೂ ಸಹ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಿಗೆ ಹೋಲಿಸಿದಾಗ ಸಮಸ್ಯೆಗಳ ನಿವಾರಣೆಯು ಕಡಿಮೆ ಮಟ್ಟದಲ್ಲಿದ್ದು, ದೇಶದಲ್ಲಿ ಪ್ರಗತಿಯನ್ನು ಸಾಧಿಸದೆಯಿರುವುದು ಅಧ್ಯಯನಗಳು ಗುರುತಿಸಿದ್ದು, ಈ ಹಿನ್ನೆಲೆಯಲ್ಲಿ ಕರ್ನಾಟಕದಲ್ಲಿ ಕೃಷಿ ವಾಣಿಜ್ಯಬೆಳೆಗಳು ಮತ್ತು ವಹಿವಾಟು ಎಂಬ ಅಧ್ಯಯನವನ್ನು ಕೈಗೊಳ್ಳಲಾಗಿದೆ.

**ಅಧ್ಯಯನದ ಉದ್ದೇಶಗಳು**

೧. ಕರ್ನಾಟಕದ ವಾಣಿಜ್ಯ ಕೃಷಿ ಸ್ವರೂಪವನ್ನು ತಿಳಿಯುವುದು.
೨. ಕರ್ನಾಟಕದ ವಾಣಿಜ್ಯ ಕೃಷಿ ಬೆಳೆಗಾರರ ಆರ್ಥಿಕತೆಯನ್ನು ತಿಳಿಯುವುದು.
೩. ವಾಣಿಜ್ಯ ಬೆಳೆಗಳ ವಹಿವಾಟಿನಲ್ಲಿ ಕರ್ನಾಟಕದ ಗ್ರಾಮೀಣ ಕೃಷಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಶೀಲಿಸುವುದು.

**ಕರ್ನಾಟಕದಲ್ಲಿ ವಾಣಿಜ್ಯ ಕೃಷಿ ಮತ್ತು ಬೆಳವಣಿಗೆ**

ಕರ್ನಾಟಕದಲ್ಲಿ ಪ್ರಧಾನವಾಗಿ ಗ್ರಾಮೀಣ ಅರ್ಥವ್ಯವಸ್ಥೆಯಾಗಿದೆ. ಇಂತಹ ಅರ್ಥವ್ಯವಸ್ಥೆಗಳಲ್ಲಿ ವ್ಯವಸಾಯವು ಪ್ರಮುಖವಾದ ವಲಯವಾಗಿರುತ್ತದೆ. ರಾಜ್ಯದ ಅಭಿವೃದ್ಧಿಗೆ ಹಲವಾರು ವಿಧಗಳಲ್ಲಿ ನೆರವಾಗುವ ಮೂಲಕ ಕೃಷಿಯು ಕರ್ನಾಟಕದ ಅರ್ಥವ್ಯವಸ್ಥೆಯ ಬೆನ್ನೆಲುಬು ಎನಿಸಿಕೊಂಡಿದೆ. ವ್ಯವಸಾಯವು ನಿಜವಾಗಿಯೂ ಒಂದು ಬೃಹತ್ ಉದ್ಯಮವಾಗಿದ್ದು ಬಹುಸಂಖ್ಯೆಯ ಜನರ ಜೀವನಾಧಾರದ ಮುಖ್ಯ ಕಸುಬಾಗಿದೆ. ಕರ್ನಾಟಕದ ಒಟ್ಟು ಜನಸಂಖ್ಯೆಯಲ್ಲಿ ಸುಮಾರು ಶೇ.೫೬ರಷ್ಟು ಜನರು ಜೀವನ ನಿರ್ವಹಣೆ ಮತ್ತು ಉದ್ಯೋಗಕ್ಕಾಗಿ ಕೃಷಿಯನ್ನ ಅವಲಂಬಿಸಿರುವರು. ಕರ್ನಾಟಕ ರಾಜ್ಯವು ವಿಸ್ತೀರ್ಣದಲ್ಲಿ ರಾಷ್ಟ್ರದ ೮ನೇ ಸ್ಥಾನದಲ್ಲಿದೆ. ಒಟ್ಟು ಸಾಗುವಳಿ ಕ್ಷೇತ್ರ ೧೨೦ಲಕ್ಷ ಹೆಕ್ಟರ್ ಇದ್ದು, ಇದರಲ್ಲಿ ಶೇ.೨೦ರಷ್ಟು ನೀರಾವರಿ ಸೌಲಭ್ಯ ಹೊಂದಿದೆ. ಉಳಿದ ಭಾಗ ಮಳೆಯಾಶ್ರಿತ ಪ್ರದೇಶವಾಗಿದೆ. ರಾಜ್ಯದಲ್ಲಿ ಒಟ್ಟು ೩೧ ಜಿಲ್ಲೆಗಳಿವೆ. ೨೦೧೫–೧೬ರಲ್ಲಿ ನಮ್ಮ ರಾಷ್ಟ್ರದ ನಿವ್ವಳ ಹಾಗೂ ಒಟ್ಟು ಸಾಗುವಳಿಯಾದ ವಿಸ್ತೀರ್ಣ ಕ್ರಮವಾಗಿ ೧೪೧.೦೦ ಹಾಗೂ ೧೯೫.೦೦ ದಶಲಕ್ಷ ಹೆಕ್ಟೇರ್‌ಗಳ ಪೈಕಿ ೨೦೧೭–೧೮ರಲ್ಲಿ ಕರ್ನಾಟಕ ರಾಜ್ಯದ ನಿವ್ವಳ ಹಾಗೂ ಒಟ್ಟು ಸಾಗುವಳಿ ವಿಸ್ತೀರ್ಣ ಕ್ರಮವಾಗಿ ೯೮.೯೫ ಲಕ್ಷ ಹೆಕ್ಟೇರ್ ಹಾಗೂ ೧೧೯.೯೩ ಲಕ್ಷ ಹೆಕ್ಟೇರ್ ಗಳಷ್ಟು ಇದೆ. ಹವಾಮಾನವು ಉಷ್ಣ, ಅತಿ ಉಷ್ಣ ಮತ್ತು ಸಮಶೀತೋಷ್ಣಗಳಿಂದ ಕೂಡಿದೆ.

ಕೃಷಿಯು ಜನರ ಜೀವನ ನಿರ್ವಹಣೆಗೆ ಆಹಾರವನ್ನು ಒದಗಿಸುತ್ತಿದೆಯಲ್ಲದೆ ಕೈಗಾರಿಕೆಗಳಿಗೆ ಕಚ್ಚಾ ಸಾಮಾಗ್ರಿಗಳು ಮತ್ತು ಬಹುದೊಡ್ಡ ಸಂಖ್ಯೆಯ ಜನರಿಗೆ ಉದ್ಯೋಗವನ್ನು ಒದಗಿಸುತ್ತಿದೆ. ಕೃಷಿ ಕರ್ನಾಟಕದ ಆರ್ಥಿಕಾಭಿವೃದ್ಧಿ ಮತ್ತು ಆದಾಯವೃದ್ಧಿಗೆ ತನ್ನದೇ ಆದ ಕೊಡುಗೆಗಳನ್ನು ಸಲ್ಲಿಸುತ್ತಿದೆ. ಯಾವುದೇ ರಾಜ್ಯವಾದರೂ ಕೃಷಿ ಅಭಿವೃದ್ಧಿಯ ಮೂಲಕವೇ ಇತರ ವಲಯಗಳ ಅಭಿವೃದ್ಧಿಗೆ ಮಾರ್ಗವನ್ನು ಕಲ್ಪಿಸಿ ಕೊಳ್ಳಬೇಕಾಗುತ್ತದೆ. ಕೃಷಿ ಕ್ಷೇತ್ರವನ್ನು ನಿರ್ಲಕ್ಷಿಸಿದರೆ ಆರ್ಥಿಕಾಭಿವೃದ್ಧಿಗೆ ಭದ್ರ ನೆಲೆಯೇ ಇರುವುದಿಲ್ಲ. ಹೀಗೆ ಕೃಷಿಯು ಬಹುಮುಖ್ಯ ಕಸುಬಾಗಿದ್ದು ಅದನ್ನು ನಿರ್ಲಕ್ಷಿಸಿದರೆ ಬದುಕುವ ಮಾರ್ಗವಿರುವುದಿಲ್ಲ.[೩]

ಕೃಷಿ ವಲಯವು ಕರ್ನಾಟಕ ರಾಜ್ಯದ ಆರ್ಥಿಕತೆ ಬೆಳವಣಿಗೆಯ ರೂವಾರಿಯಾಗುವ ಸಾಮರ್ಥ್ಯವನ್ನು ಹೊಂದಿರುವ ಅತ್ಯಂತ ನಿರ್ಣಾಯಕ ವಲಯಗಳಲ್ಲಿ ಒಂದಾಗಿದೆ. ಉತ್ಪಾದನೆಯಿಂದ ಸಂಸ್ಕರಣೆವರೆಗೆ ಮತ್ತು ವಿತರಣೆಯಿಂದ ಹಿಡಿದು ಚಿಲ್ಲರೆ ವ್ಯಾಪಾರದವರೆಗೆ ಕೃಷಿ ಪೂರೈಕೆ ಸರಪಳಿಯ ಮೇಲೆ ಕೃಷಿ ವಲಯದ ಪ್ರಗತಿಪರ ಬೆಳವಣಿಗೆಯು ಅವಲಂಭಿಸಿದೆ ಮತ್ತು ರಾಜ್ಯಾದಾಯದಲ್ಲಿ ದೊಡ್ಡ ಪಾಲು ಕಳೆದ ಐದು ದಶಕಗಳ ಅವಧಿಯಲ್ಲಿ ಕೈಗಾರೀಕರಣಕ್ಕಾಗಿ ನಡೆಸಿದ ಹಲವಾರು ಪ್ರಯತ್ನಗಳ ನಡುವೆಯೂ ಕರ್ನಾಟಕವು ಇಂದಿಗೂ ಕೃಷಿ ಪ್ರಧಾನವಾದ ರಾಜ್ಯವಾಗಿಯೇ ಉಳಿದಿದೆ. ಕೃಷಿ ಕ್ಷೇತ್ರವು ಇಂದು ರಾಜ್ಯದ ಆದಾಯದಲ್ಲಿ ಸಾಕಷ್ಟು ದೊಡ್ಡ ಪಾಲನ್ನು ಹೊಂದಿದೆ. ಕೃಷಿ ಇಂದಿಗೂ ಜಿ.ಎಸ್.ಡಿ.ಪಿ ಯಲ್ಲಿ ಶೇ.೪ ಭಾಗದಷ್ಟು ಕೊಡುಗೆಯನ್ನು ರಾಜ್ಯಕ್ಕೆ ಸಲ್ಲಿಸುತ್ತಿದೆ ಇದರಿಂದ ನಮ್ಮ ರಾಜ್ಯದ ಆರ್ಥಿಕತೆಗೆ ಹೆಚ್ಚು ಸಕರಾತ್ಮಕ ಬೆಳವಣಿಗೆಯನ್ನು ನೀಡುತ್ತಿದೆ. ರಾಜ್ಯದಲ್ಲಿ ಕೃಷಿ ಸಂಬಂಧಿತ ವಲಯಗಳು ಉದ್ಯೋಗ

[3] ಕೃಷ್ಣಮೂರ್ತಿ, ಕರ್ನಾಟಕ ಆರ್ಥಿಕತೆ, ಪು.ಸಂ ೯೯.

ಮತ್ತು ಜೀವನೋಪಾಯದ ಅತಿದೊಡ್ಡ ಮೂಲವಾಗಿದೆ. ಗ್ರಾಮೀಣ ಭಾಗದ ಜನರು ರೈತರಾಗಿ, ಕಾರ್ಮಿಕರಾಗಿ ಮತ್ತು ಉದ್ಯಮಿಗಳಾಗಿ ಭಾರತದ ಕೃಷಿ ಮತ್ತು ಇತರ ಗ್ರಾಮೀಣ ಉದ್ಯಮಗಳಿಗೆ ನಿರ್ಣಾಯಕ ಕೊಡುಗೆಯನ್ನು ನೀಡುತ್ತಿದ್ದಾರೆ. ಆದರೆ ೨೦೧೯ರಲ್ಲಿ ಬಂದ ಕೋವಿಡ್ ನಂತಹ ಸಾಂಕ್ರಾಮಿಕ ಕಾಯಿಲೆಯಿಂದಾಗಿ ಕರ್ನಾಟಕ ರಾಜ್ಯವು ಕೃಷಿ ಬೆಳವಣಿಗೆಯಲ್ಲಿ ಅಪಾರ ಪ್ರಮಾಣದ ನಷ್ಟವನ್ನು ತಂದೊದಗಿದೆ. ಅಂದರೆ ಕೃಷಿಕನ್ನು ತಮ್ಮ ಉತ್ಪನ್ನವನ್ನು ವಹಿವಾಟು ಮಾಡುವಲ್ಲಿ ಅಥಾವ ಮಾರುಕಟ್ಟೆಗೆ ತಲುಪಿಸುವಲ್ಲಿ ಕಚ್ಚಾ ಸಾರಿಗೆ, ಮಧ್ಯವರ್ತಿಗಳ ಕಾಟ, ಬೆಂಬಲ ಬೆಲೆಯ ಕೊರತೆ, ಪ್ರಕೃತಿಯ ಸಮಸ್ಯೆ, ಸಾಗುವಳಿಯಲ್ಲಿ ಬಂಡವಾಳದ ಕೊರತೆ, ಮಾರುಕಟ್ಟೆಯಲ್ಲಿ ಉಗ್ರಾಣದ ಸಮಸ್ಯೆ ಮತ್ತು ಉತ್ಪನ್ನಗಳ ತೂಕದಲ್ಲಿ ಮೊಸ ವೈಜ್ಞಾನಿಕ ಶೀತಲ ಶೇಖರಣೆಗಳ ಸಮಸ್ಯೆ ಹೀಗೆ ಇನ್ನು ಸಾಕಷ್ಟು ರೀತಿಯ ಸಮಸ್ಯೆಗಳನ್ನು ರಾಜ್ಯದಲ್ಲಿ ರೈತರು ಎದುರಿಸುತ್ತಿದ್ದು ಅವರ ಸಮಸ್ಯೆಗಳಿಗೆ ಸರ್ಕಾರವು ಪರಿಹರಿಸಬೇಕಾಗಿದೆ.

ಕರ್ನಾಟಕವು ೧.೯೨ ಲಕ್ಷ ಚದರ ಕಿ.ಮೀ. ಭೌಗೋಳಿಕ ಕ್ಷೇತ್ರವನ್ನು ಒಳಗೊಂಡ ಮತ್ತು ದೇಶದ ಭೌಗೋಳಿಕ ಕ್ಷೇತ್ರದ ಶೇಕಡ ೬.೩ ರಷ್ಟು ಭಾಗವನ್ನು ಹೊಂದಿದೆ ಭಾರತದ ಎಂಟನೇ ಅತೀ ದೊಡ್ಡ ರಾಜ್ಯವಾಗಿದೆ. ರಾಜ್ಯವನ್ನು ಸುಮಾರು ೨೯೪೮೩ ಗ್ರಾಮಗಳನ್ನು ವ್ಯಾಪಿಸುವ ೩೧ ಜಿಲ್ಲೆಗಳನ್ನಾಗಿ ಮತ್ತು ತಾಲ್ಲೂಕುಗಳನ್ನಾಗಿ ರೂಪಿಸಲಾಗಿದೆ. ಕರ್ನಾಟಕದಲ್ಲಿ ಕೃಷಿಯು ಬಹುಮುಖ್ಯಯ ಗ್ರಾಮೀಣ ಜನರ ಪ್ರಮುಖ ವೃತ್ತಿಯಾಗಿದೆ. ೨೦೧೧ನೇ ಜನಗಣತಿ ಪ್ರಕಾರ ಕೃಷಿಯು ೧೩.೭೪ ದಶಲಕ್ಷ ಕಾರ್ಮಿಕರಿಗೆ ಬೆಂಬಲದಾಯಕವಾಗಿದ್ದು. ಅವರ ಪೈಕಿ ಶೇಕಡ ೨೩.೬೧ರಷ್ಟು ಜನರು ಕೃಷಿಕರಾಗಿದ್ದಾರೆ ಮತ್ತು ಶೇಕಡ ೨೫.೬೭ರಷ್ಟು ಕೃಷಿ ಕಾರ್ಮಿಕರಾಗಿದ್ದಾರೆ.

ಕರ್ನಾಟಕ ರಾಜ್ಯದ ಕೃಷಿ ಭೂ ಬಳಕೆ ಮತ್ತು ಕೃಷಿ ಭೂ ಹಿಡುವಳಿಯನ್ನು ೨೦೧೯–೨೦ನೇ ಸಾಲಿನ ಭೂ–ಬಳಕೆಯ ಅಂಕಿ–ಅಂಶಗಳ ವರದಿಯ ಪ್ರಕಾರ, ರಾಜ್ಯದ ಒಟ್ಟು ಭೌಗೋಳಿಕ ವಿಸ್ತೀರ್ಣ ೧೯೦.೫೦ ಲಕ್ಷ ಹೆಕ್ಟರ್‌ಗಳ ಪೈಕಿ ನಿವ್ವಳ ಬಿತ್ತನೆಯಾದ ಕ್ಷೇತ್ರ ೧೦೮.೦೪ ಲಕ್ಷ ಹೆಕ್ಟರ್‌ಗಳಷ್ಟಿದ್ದು, ಒಟ್ಟು ಭೌಗೋಳಿಕ ಕ್ಷೇತ್ರ ಶೇಕಡ ೫೬ರಷ್ಟಾಗಿರುತ್ತದೆ. ಒಟ್ಟು ಬಿತ್ತನೆಯಾಗಿರುವ ಪ್ರದೇಶದ ವಿಸ್ತೀರ್ಣ ೧೩೮.೩೧ ಲಕ್ಷ ಹೆಕ್ಟರ್‌ಗಳಾಗಿದ್ದು, ಇದರಲ್ಲಿ ೩೦.೨೭ ಲಕ್ಷ ಹೆಕ್ಟರ್ ವಿಸ್ತೀರ್ಣದಲ್ಲಿ ೧ಕ್ಕಿಂತ ಹೆಚ್ಚು ಬಾರಿ ಸಾಗುವಳಿಯಾಗಿರುತ್ತದೆ. ಹೀಗಾಗಿ, ಬೆಳೆ ಸಾಂದ್ರತೆ ಶೇಕಡ ೧೨೮ರಷ್ಟಿರುತ್ತದೆ. ಸುಮಾರು ಶೇಕಡ ೧೬ರಷ್ಟು ವಿಸ್ತೀರ್ಣವು ಅರಣ್ಯ ಪ್ರದೇಶಕ್ಕೆ ಒಳಪಟ್ಟಿರುತ್ತದೆ. ಶೇಕಡ ೮ರಷ್ಟು ವಿಸ್ತೀರ್ಣವನ್ನು ವ್ಯವಸಾಯೇತರ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಲಾಗಿದೆ. ಶೇಕಡ ೪ರಷ್ಟು ವಿಸ್ತೀರ್ಣ ಬಂಜರು ಹಾಗೂ ವ್ಯವಸಾಯ ಮಾಡಲು ಸಾಧ್ಯವಿಲ್ಲದ ಪ್ರದೇಶವಾಗಿದೆ ಹಾಗೂ ಶೇಕಡ ೨ರಷ್ಟು ವಿಸ್ತೀರ್ಣ ಸಾಗುವಳಿಗೆ ಯೋಗ್ಯವಾದ ಬಂಜರು ಪ್ರದೇಶವಾಗಿರುತ್ತದೆ.

ಖಾಯಂ ಗೋಮಾಳ, ಇತರೆ ಹಲ್ಲುಗಾವಲು ಶೇಕಡ ೫ರಷ್ಟಿದ್ದು, ಬಿತ್ತನೆಯಾಗಿರುವ ಪ್ರದೇಶದಲ್ಲಿ ನಮೂದಿಸಿಲ್ಲದ ವಿವಿಧ ವೃಕ್ಷ ತೋಪುಗಳಿರುವ ವಿಸ್ತೀರ್ಣ ಶೇಕಡ ೧ರಷ್ಟಿರುತ್ತದೆ. ಸುಮಾರು ಶೇಕಡ ೮ರಷ್ಟು ವಿಸ್ತೀರ್ಣ ಚಾಲ್ತಿ ಸಾಗುವಳಿಯಲ್ಲಿಲ್ಲದ ಬೀಳು ಬಿಟ್ಟ ಜಮೀನು ಹಾಗೂ ಇತರೆ ಬೀಳು ಜಮೀನಾಗಿರುತ್ತದೆ. ಕೆಳಗಿನ ಕೋಷ್ಟಕದಲ್ಲಿ ಕರ್ನಾಟಕ ರಾಜ್ಯದ ಭೂ ಹಿಡುವಳಿಯ ವಿವರಗಳನ್ನು ನೀಡಲಾಗಿದೆ.

**ಕೋಷ್ಟಕ ೧**

**೨೦೦೫–೦೬ ರಿಂದ ೨೦೧೫–೧೬ರ ವರೆಗಿನ ಕರ್ನಾಟಕ ರಾಜ್ಯದ ಭೂ ಹಿಡುವಳಿದಾರರ ವಿವರ**

| ಕ್ರ.ಸಂ. | ಹಿಡುವಳಿ ದಾರರು | ೨೦೦೫–೦೬ | | ೨೦೧೦–೧೧ | | ೨೦೧೫–೧೬ | |
|---|---|---|---|---|---|---|---|
| | | ಸಂಖ್ಯೆ | ಶೇಕಡ | ಸಂಖ್ಯೆ | ಶೇಕಡ | ಸಂಖ್ಯೆ | ಶೇಕಡ |
| ೧. | ಅತಿಸಣ್ಣ. ಹಿ | ೩೬೫೫ | ೪೮.೫೨ | ೩೮೪೯ | ೪೯.೧೪ | ೪೭೬೭ | ೫೪.೯೧ |
| ೨. | ಸಣ್ಣ. ಹಿ | ೨೦೧೪ | ೨೬.೭೩ | ೨೧೩೮ | ೨೭.೨೯ | ೨೨೧೪ | ೨೫.೬೯ |
| ೩. | ಅರೆ ಮಧ್ಯಮ ಹಿ | ೧೨೭೮ | ೧೬.೯೬ | ೧೨೬೭ | ೧೬.೧೭ | ೧೧೯ | ೧.೩೭ |
| ೪. | ಮಧ್ಯಮ. ಹಿ | ೫೫೫ | ೭.೩೬ | ೫೧೧ | ೬.೫೨ | ೪೫೧ | ೫.೧೯ |
| ೫. | ದೊಡ್ಡ. ಹಿ | ೭೯ | ೧.೦೯ | ೬೮ | ೦.೮೬ | ೫೬ | ೦.೬೪ |
| **ಒಟ್ಟು** | | **೭೫೩೨** | **೧೦೦** | **೭೮೩೨** | **೧೦೦** | **೮೬೮೧** | **೧೦೦** |

**ಮೂಲ: ಆರ್ಥಿಕ ಮತ್ತು ಸಾಂಕಿಕ ನಿರ್ದೇಶನಾಲಯದ ವರದಿ ೨೦೨೦–೨೧**

ಕರ್ನಾಟಕದಲ್ಲಿ ಒಟ್ಟು ೧,೨೩,೧೦೦ ಕಿ.ಮೀ.ನಷ್ಟು ಜಮೀನು ಕೃಷಿಗೊಳಪಟ್ಟಿದ್ದು. ಅದು ರಾಜ್ಯದ ಒಟ್ಟು ಭೌಗೋಳಿಕ ಕ್ಷೇತ್ರದ ೬೪.೬ರಷ್ಟು ಪ್ರದೇಶವಾಗಿದೆ. ಕರ್ನಾಟಕದ ಕೃಷಿ ವಲಯವನ್ನು ಬರಪೀಡಿತ ಪ್ರದೇಶದ ವಿಶಾಲ ಹುಲ್ಲುಗಾವಲಿನ ಮತ್ತು ನೀರಾವರಿ ಪ್ರದೇಶದ ವಿರಳ ಸ್ವರೂಪದ ಗುಣಲಕ್ಷಣ ಹೊಂದಿದೆ. ಹಾಗಾಗಿ, ರಾಜ್ಯದಲ್ಲಿನ ಕೃಷಿ ಭೂಮಿಯ ಬಹುತೇಕ ಭಾಗವು, ತೀವ್ರ ಕೃಷಿ–ಹವಾಮಾನಿಕ ಮತ್ತು ಸಂಪನ್ಮೂಲ ಇತಿಮಿತಿಗಳೊಂದಿಗೆ ಮುಂಗಾರು ಅದೃಷ್ಟದಾಟಕ್ಕೆ ಗುರಿಯಾಗಿದೆ. ಕೃಷಿಯು, ಕರ್ನಾಟಕದ ಕಾರ್ಯಬಲದ ಶೇಕಡ ೬೮ರಷ್ಟಕ್ಕಿಂತ ಹೆಚ್ಚು ಜನರನ್ನು ಒಳಗೊಂಡಿದೆ. ಕರ್ನಾಟಕದಲ್ಲಿ ಕೃಷಿಯು, ಬಹುತೇಕವಾಗಿ ನೈರುತ್ಯ ಮುಂಗಾರು ಮಳೆಯನ್ನು ಅವಲಂಬಿಸಿದೆ. ಬಿತ್ತನೆ ಪ್ರದೇಶದ (೩೦,೯೦೦) ಶೇಕಡ ೨೬.೫ರಷ್ಟು ಪ್ರದೇಶ ಮಾತ್ರವೇ ನೀರಾಮಗೊಳಪಟ್ಟಿದ್ದರೆ, ಒಟ್ಟು ಭೌಗೋಳಿಕ ಕ್ಷೇತ್ರದ ಶೇಕಡ ೬೪.೬೦ರಷ್ಟು ಪ್ರದೇಶವು ಕೃಷಿಗೊಳಪಟ್ಟಿದೆ. ತೋಟಗಾರಿಕೆಗೆ ಒಳಪಟ್ಟ ಒಟ್ಟು ಕ್ಷೇತ್ರದ ದೃಷ್ಟಿಯಲ್ಲಿ ರಾಜ್ಯವು ಭಾರತದಲ್ಲಿ ೫ನೇ ಸ್ಥಾನದಲ್ಲಿದೆ. ರಾಜ್ಯವು ತರಕಾರಿ ಬೆಳೆಗಳ ಉತ್ಪಾದನೆಯಲ್ಲಿ ಐದನೇ ಸ್ಥಾನದಲ್ಲಿ ಮತ್ತು ಹಣ್ಣು ಬೆಳೆಯ ಉತ್ಪಾದನೆಯಲ್ಲಿ ಮೂರನೇ ಸ್ಥಾನದಲ್ಲಿದೆ. ಇನ್ನು ಸಾಂಬಾರು ಪದಾರ್ಥಗಳು, ಸುಗಂಧ ದ್ರವ್ಯ ಮತ್ತು ಔಷಧೀಯ ಬೆಳೆಗಳ ಹಾಗೂ ಉಷ್ಣವಲಯದ ಹಣ್ಣುಗಳ ಬಹು ದೊಡ್ಡ ಉತ್ಪಾದಕ ರಾಜ್ಯವಾಗಿದೆ. ಗುಜರಾತ್ ನಂತರ ಇದು ಎರಡನೇ ಅತೀ ದೊಡ್ಡ ಹಾಲು ಉತ್ಪಾದಕ ರಾಜ್ಯವಾಗಿದೆ.

ಕರ್ನಾಟಕವು ದೇಶದಲ್ಲಿ ದ್ರಾಕ್ಷಿ ಹಣ್ಣುಗಳ ಎರಡನೇ ಅತೀ ದೊಡ್ಡ ಉತ್ಪಾದಕ ರಾಜ್ಯವಾಗಿದ್ದು, ದೇಶದ ಒಟ್ಟು ಹಣ್ಣುಗಳ ಶೇಕಡ ೧೨ರಷ್ಟು ಉತ್ಪಾದನೆಯಲ್ಲಿ ಶೇಕಡ ೨ರಷ್ಟಿದೆ. ಒಟ್ಟು ತರಕಾರಿ

ಉತ್ಪಾದನೆಯ ಶೇಕಡ ೮ರಷ್ಟಿದೆ ಮತ್ತು ಒಟ್ಟು ಕಾಫಿ ಬೆಳೆಯ ಶೇಕಡ ೭೦ರಷ್ಟಿದೆ. ಇದು ಮೂರನೇ ಅತಿ ದೊಡ್ಡ ಸಕ್ಕರೆ ಉತ್ಪಾದಕ ರಾಜ್ಯವಾಗಿದ್ದು, ಕಬ್ಬು ಉತ್ಪಾದನೆಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ. ಪುಷ್ಪ ಕೃಷಿಯಲ್ಲಿ, ಕರ್ನಾಟಕವು ಭಾರತದಲ್ಲಿ ಎರಡನೇ ಸ್ಥಾನವನ್ನು ಗಳಿಸಿದೆ. ಕರ್ನಾಟಕವು ದೇಶದಲ್ಲೇ ಬಹು ದೊಡ್ಡ ರೇಷ್ಮೆ ಉತ್ಪಾದಕ ರಾಜ್ಯವಾಗಿದೆ. ರಾಜ್ಯವು ೩೨೦ ಕಿ.ಮೀ. ಕರಾವಳಿ ಪ್ರದೇಶ ಹೊಂದಿದ್ದು, ೨೬ ವೈವಿಧ್ಯಮಯ ಮೀನು ಕೃಷಿಯೊಂದಿಗೆ ೪೨೫,೦೦೦ ಮೆಟ್ರಿಕ್ ಟನ್‌ನಷ್ಟು ವಾರ್ಷಿಕ ಸಮುದ್ರ ಉತ್ಪತ್ತಿ ಗಳಿಕೆ ಹೊಂದಿದೆ.[೪]

ಭಾರತದ ಒಟ್ಟು ರಫ್ತು ಮಾರುಕಟ್ಟೆಯ ಶೇಕಡ ೨೫.೦೦ರಷ್ಟು ಅಂದಾಜು ಪಾಲಿನೊಂದಿಗೆ ಭಾರತದಲ್ಲಿ ರೇಷ್ಮೆ ರಫ್ತಿನಲ್ಲಿ ಕರ್ನಾಟಕವು ಮುಂಚೂಣಿಯಲ್ಲಿದೆ. ರಾಜ್ಯದ ಸ್ಥಳೀಯ ಉತ್ಪಾದನೆಯಲ್ಲಿ ರಾಜ್ಯದ ಪಾಲಿನಲ್ಲಿ ಇಳಿಕೆಯಾಗಿದ್ದರೂ, ಕರ್ನಾಟಕದ ಆರ್ಥಿಕತೆಯ ಒಟ್ಟಾರೆ ಬೆಳವಣಿಗೆಯಲ್ಲಿ ಕೃಷಿಯು ಪ್ರಮುಖ ಪಾತ್ರ ವಹಿಸಿದೆ. ಕರ್ನಾಟಕದಲ್ಲಿ, ತೋಟಗಾರಿಕೆ ಬೆಳೆಯನ್ನು ಸುಮಾರು ೯೬.೬೦ ಲಕ್ಷ ಟನ್ನುಗಳ ವಾರ್ಷಿಕ ಉತ್ಪಾದನೆಯೊಂದಿಗೆ ಸುಮಾರು ೧೫.೨೧ ಲಕ್ಷ ಹೆಕ್ಟೇರು ಪ್ರದೇಶದಲ್ಲಿ ಬೆಳೆಯಲಾಗುತ್ತಿದೆ. ತರಕಾರಿ ಉತ್ಪಾದನೆಗೆ ಸಂಬಂಧಿಸಿದಂತೆ ಕರ್ನಾಟಕವು ಅತ್ಯಂತ ಹೆಚ್ಚು ಪ್ರಗತಿದಾಯಕ ರಾಜ್ಯವಾಗಿದ್ದು, ಉಷ್ಣಾಂಶದಲ್ಲಿ ಯಾವುದೇ ರೀತಿಯ ಅತಿಯಾದ ಏರುಪೇರುಗಳಿಲ್ಲದ ಅನುಕೂಲಕರ ಹವಾಮಾನಿಕ ಪರಿಸ್ಥಿತಿಗಳ ಕಾರಣದಿಂದ ಈ ಪ್ರಯೋಜನವನ್ನು ಅನುಭವಿಸುತ್ತಲಿದೆ. ರಾಜ್ಯವು ಪುಷ್ಪ ಕೃಷಿ ಉತ್ಪಾದನೆಯಲ್ಲಿ ಸಹ ಪ್ರಸಿದ್ಧವಾಗಿದ್ದು, ದೇಶದಲ್ಲಿ ಪ್ರಮುಖ ರೇಷ್ಮೆ ಉತ್ಪಾದಕ ರಾಜ್ಯವಾಗಿದೆ. ಮೀನು ಕೃಷಿ ವಲಯವು ಈಗ, ರಾಜ್ಯದಲ್ಲಿನ ಪೂರಕ ಕೃಷಿ ಚಟುವಟಿಕೆಗಳಲ್ಲಿ ಅತ್ಯಂತ ಪ್ರಮುಖವಾಗಿ ಹೊರಹೊಮ್ಮುತ್ತಿರುವ ವಲಯವಾಗಿದೆ. ಕೃಷಿಯು, ಪ್ರಮುಖ ಕಾರಚಟುವಟಿಕೆಯಾಗಿದ್ದು, ರಾಜ್ಯದಲ್ಲಿನ ಗ್ರಾಮೀಣ ಜನರ ಜೀವನೋಪಾಯದ ಮುಖ್ಯ ಆಕರವಾಗಿದೆ. ಕೃಷಿಯನ್ನು ವಿಶಾಲ ಬೆಳೆ ವೈವಿಧ್ಯತೀಕರಣವೆಂದು ವರ್ಗೀಕರಿಸಲಾಗಿದ್ದು. ನೈರುತ್ಯ ಮುಂಗಾರು ಮಳೆಯ ಅದೃಷ್ಟದಾಟದ ಮೇಲೆ ಅಧಿಕವಾಗಿ ಅವಲಂಬಿತವಾಗಿ ಉಳಿದಿದೆ.[೫]

ರಾಜ್ಯದ ಒಟ್ಟಾರೆ ಜಿಎಸ್‌ಡಿಪಿ ಗೆ ಕೃಷಿ ವಲಯದ ಕೊಡುಗೆ ಶೇ.೧೩.೧೫ ರಷ್ಟಿದೆ (೨೦೨೦–೨೧). ೨೦೧೯–೨೦ರಲ್ಲಿ ರಾಜ್ಯದ ಕೃಷಿ ವೆಚ್ಚ ಸುಮಾರು ೨೩೬೯೨.೯೩ ಕೋಟಿ. ಕೃಷಿ ಸಂಶೋಧನೆ ಮತ್ತು ಶಿಕ್ಷಣವು ಏರುತ್ತಿರುವ ಮಾನವ ಮತ್ತು ಪ್ರಾಣಿಗಳ ಜನಸಂಖ್ಯೆಗೆ ಆಹಾರ ಒದಗಿಸುವ ಮತ್ತು ಪರಿಸರ ಸ್ನೇಹಿ ಸುಸ್ಥಿರ ಕೃಷಿ ಅಭಿವೃದ್ಧಿಯ ವಿಕಾಸದ ಸವಾಲನ್ನು ಪೂರೈಸುವ ನಿಟ್ಟಿನಲ್ಲಿ ಯಾವುದೇ ಸರ್ಕಾರದ ಕಾರ್ಯತಂತ್ರದ ಪ್ರಮುಖ ಭಾಗವಾಗಿದೆ. ಭಾರತವು ವಿಶ್ವದ ಅತಿದೊಡ್ಡ ಮತ್ತು ಉತ್ತಮ ಸಂಘಟಿತ ಕೃಷಿ ಸಂಶೋಧನಾ ವ್ಯವಸ್ಥೆಗಳಲ್ಲಿ ಒಂದಾಗಿದೆ. ಉದಯೋನ್ಮುಖ ಸಂಶೋಧನೆ ಮತ್ತು ಶಿಕ್ಷಣದ ಸವಾಲುಗಳನ್ನು ಎದುರಿಸಲು ಭಾರತೀಯ ಕೃಷಿ ಸಂಶೋಧನಾ ಮಂಡಳಿಯಡಿ (ಐಸಿಎಆರ್) ವಿವಿಧ ಸಂಸ್ಥೆಗಳು, ಕೃಷಿ ವಿಶ್ವವಿದ್ಯಾಲಯಗಳು (ಎಸ್‌ಎಯು) ಮತ್ತು ಕೃಷಿ ವಿಜ್ಞಾನ ಕೇಂದ್ರಗಳನ್ನು (ಕೆವಿಕೆ) ಸ್ಥಾಪಿಸಲಾಯಿತು.[೬]

---

[4] ಕರ್ನಾಟಕ ಸರ್ಕಾರದ ಕೃಷಿ ಮತ್ತು ಆಹಾರ ನಿರ್ವಹಣೆ ಕೈಪಿಡಿ ೨೦೨೦–೨೧

[೫] ಅದೇ ಪುಟ ೧೯೫

[೬] ದಿ ಎಕನಾಮಿಕ ಸರ್ವೇ ಆಫ್ ಕರ್ನಾಟಕ, ೨೦೨೦–೨೧.

ಕರ್ನಾಟಕದಲ್ಲಿ ವಾಣಿಜ್ಯ ಬೆಳೆಗಳ ಉತ್ಪಾದನೆಯ ಬೆಳವಣಿಗೆಯಲ್ಲಿ ಕೃಷಿಯು ಪ್ರಮುಖ ಪಾತ್ರವಹಿಸುತ್ತದೆ. ಇಲ್ಲಿನ ಮಣ್ಣು ಮತ್ತು ಹವಮಾನವು ಪರಿಸ್ಥಿತಿಯು ಸಹ ಕೃಷಿಗೆ ಸಹಕಾರಿಯಾಗಿದೆ. ಕರ್ನಾಟಕದ ಬಹಳ ಮುಖ್ಯವಾಗಿ ಬೆಳೆಯುವಂತಹ ವಾಣಿಜ್ಯ ಬೆಳೆಗಳು ಅಂದರೆ ಕಬ್ಬು, ಹತ್ತಿ, ತಂಬಾಕು, ಕಾಫಿ, ರಬ್ಬರ್, ಮೆಕ್ಕೆಜೋಳ, ಒಣ ಮೆಣಸಿನಕಾಯಿ, ತೆಂಗಿನಕಾಯಿ, ಅಡಿಕೆ, ಏಲಕ್ಕಿ, ಮೆಣಸು, ಸೂರ್ಯಕಾಂತಿ, ಮಾವಿನ ಹಣ್ಣು, ತೆಂಗು ಮುಂತಾದವು ಆಗಿದೆ. ಕರ್ನಾಟದಲ್ಲಿ ಬೆಳೆಯುವಂತಹ ಪ್ರಮುಖ ವಾಣಿಜ್ಯ ಬೆಳೆಗಳ ೨೦೧೦ ರಿಂದ ೨೦೨೧ರ ವರೆಗಿನ ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿಯ ವಿವರಗಳನ್ನು ಕೆಳಕಂಡಂತೆ ವಿವರಿಸಲಾಗಿದೆ.

**ಕೊಷ್ಟಕ ೨**

**೨೦೧೫–೧೬ ರಿಂದ ೨೦೧೮–೧೯ರ ವರೆಗಿನ ಕರ್ನಾಟಕದಲ್ಲಿ ಬೆಳೆದಂತಹ ಪ್ರಮುಖ ವಾಣಿಜ್ಯ ಬೆಳೆಗಳ ವಿಸ್ತೀರ್ಣ, ಉತ್ಪಾದವೆ ಮತ್ತು ಇಳುವರಿಯ**

| ಕ್ರ.ಸಂ. | ಬೆಳೆಗಳು | ಬೆಳೆಯ ಅಂದಾಜು ವಿವರ | ೨೦೧೫–೧೬ | ೨೦೧೬–೧೭ | ೨೦೧೭–೧೮ | ೨೦೧೮–೧೯ |
|---|---|---|---|---|---|---|
| ೧. | ಹತ್ತಿ | ಪ್ರದೇಶ | ೮.೭೭ | ೫.೧೦ | ೫.೪೭ | ೭.೧೮ |
| | | ಉತ್ಪಾದನೆ | ೨೨.೭೩ | ೯.೬೮ | ೧೭.೭೧ | ೧೪.೩೭ |
| | | ಇಳುವರಿ | ೪೬೪ | ೩.೯೭ | ೪.೦೦ | ೩೫೮ |
| ೨. | ಕಬ್ಬು | ಪ್ರದೇಶ | ೪.೮೦ | ೩.೯೭ | ೪.೦೦ | ೪.೯೬ |
| | | ಉತ್ಪಾದನೆ | ೪೩೮.೩೮ | ೨೭೩.೭೮ | ೩೭೪.೬೧ | ೪೨೩.೨೩ |
| | | ಇಳುವರಿ | ೯೮ | ೭೩ | ೯೯ | ೯೦ |
| ೩. | ತಂಬಾಕು | ಪ್ರದೇಶ | ೦.೯೪ | ೦.೯೦ | ೦.೯೫ | ೦.೮೮ |
| | | ಉತ್ಪಾದನೆ | ೦.೬೬ | ೦.೬೬ | ೦.೯೫ | ೦.೭೬ |
| | | ಇಳುವರಿ | ೭೩೫ | ೭೭೮ | ೧೦೫೪ | ೯೧೦ |
| ೪. | ತೆಂಗು | ಪ್ರದೇಶ | ೦.೩೦ | ೪.೩೭ | ೪.೪೬ | ೬.೧೦ |
| | | ಉತ್ಪಾದನೆ | ೧೧.೨೮ | ೩೪೭೨.೪೯ | ೩,೨೮೪.೬೯ | ೪,೯೮೨.೪೬ |
| | | ಇಳುವರಿ | ೧೨೮೭ | ೮೦೧೯ | ೭೪೩೫ | ೮೨೪೭ |
| ೫. | ಒಣ ಮೆಣಸಿನ ಕಾಯಿ | ಪ್ರದೇಶ | ೦.೯೫ | ೧.೨೭ | ೧.೦೨ | ೧.೭೩ |
| | | ಉತ್ಪಾದನೆ | ೧.೧೭ | ೨.೭೬ | ೨.೦೭ | ೨.೫೭ |
| | | ಇಳುವರಿ | ೧೨೮೭ | ೨೨೮೨ | ೨೧೩೮ | ೧೫೬೧ |

**(ಆರ್ಥಿಕ ಮತ್ತು ಸಾಂಕಿಕ ನಿರ್ದೇಶನಾಲಯದ ವರದಿ ೨೦೨೦–೨೧)**

ಈ ಮೇಲಿನ ಕೊಷ್ಟಕದಲ್ಲಿ ೨೦೧೫–೧೬ ರಿಂದ ೨೦೧೮–೧೯ರ ವರೆಗಿನ ಕರ್ನಾಟಕದಲ್ಲಿ ಬೆಳೆದಂತಹ ಪ್ರಮುಖ ವಾಣಿಜ್ಯ ಬೆಳೆಗಳ ವಿಸ್ತೀರ್ಣ, ಉತ್ಪಾದವೆ ಮತ್ತು ಇಳುವರಿಯ ಬಗ್ಗೆ ವಿವರಿಸಲಾಗಿದೆ. ಮುಖ್ಯವಾಗಿ ಈಶಾನ್ಯ ಕರ್ನಾಟಕ ಭಾಗದಲ್ಲಿ ಬೆಳೆಯಲಾಗುವಂತಹ ಪ್ರಮುಖ ಆದಾಯ ತರುವಂತಹ ನಗದು ಬೆಳೆಗಳ ವಿವರಗಳನ್ನು ನೀಡಲಾಗಿದ್ದು. ಮೊದಲನೇಯದಾಗಿ ಹತ್ತಿ ಬೆಳೆಯು ೨೦೧೬–೧೭ ರಿಂದ ೨೦೧೮–೧೯ರ ವರೆಗಿನ ಪ್ರದೇಶವನ್ನು ಗಮನಿಸಿದಾಗ ೨೦೧೬ರಲ್ಲಿ ಶೇ.೫.೧೯ರಷ್ಟು ಇದ್ದ ಪ್ರದೇಶವು ೨೦೧೮–೧೯ರಲ್ಲಿ ಶೇ.೭.೧೮ರಷ್ಟು ಇದೆ ಅಂದರೆ ಸುಮಾರು ಪ್ರತಿಶತ ಶೇ.೨.೦೮ರಷ್ಟು ಭಾಗ ಪ್ರದೇಶವು ಏರಿಕೆಯನ್ನು ಕಂಡಿದೆ ಹಾಗೆ ಉತ್ಪಾದನೆ ಮತ್ತು ಇಳುವರಿಯ ಪ್ರಮಾಣವನ್ನು ಗಮನಿಸಿದರೆ ಶೇ.೯.೬೮ರಷ್ಟು ಮತ್ತು ೩೯೭ರಷ್ಟು ಇದ್ದು ೨೦೧೫–೧೬ರಲ್ಲಿ ಶೇ.೪.೦೦ ಮತ್ತು ೩೫೮ರಷ್ಟು. ಕಬ್ಬು ಬೆಳೆಯ ಪ್ರದೇಶವು ೨೦೧೦–೧೧ರಲ್ಲಿ ಶೇ.೩.೯೭ರಷ್ಟು ಇದ್ದ ಪ್ರದೇಶವು ೨೦೧೫–೧೬ರಲ್ಲಿ ಶೇ.೪.೯೪ರಷ್ಟು ಇದೆ ಅಂದರೆ ಸುಮಾರು ಪ್ರತಿಶತ ಶೇ.೦.೯೭ರಷ್ಟು ಭಾಗ ಪ್ರದೇಶವು ನಿಧಾನಗತಿಯಲ್ಲಿ ಏರಿಕೆಯನ್ನು ಕಂಡಿದೆ.

ಹಾಗೆ ಉತ್ಪಾದನೆ ಮತ್ತು ಇಳುವರಿಯ ಪ್ರಮಾಣವನ್ನು ಗಮನಿಸಿದರೆ ಶೇ.೨೭೩.೭೮ರಷ್ಟು ಮತ್ತು ೭೩ರಷ್ಟು ಇದ್ದು ೨೦೧೫–೧೬ರಲ್ಲಿ ಶೇ.೪೨೩.೨೩ ಮತ್ತು ೯೦ರಷ್ಟು ಅಂದರೆ ೧೭ರಷ್ಟು ಇಳುವರಿಯಲ್ಲಿ ಇಳಿಕೆಯನ್ನು ಕಂಡಿದೆ. ನಂತರ ತಂಬಾಕು ಬೆಳೆಯಲ್ಲಿ ೨೦೧೦ರಲ್ಲಿ ಶೇ.೦.೯೦ರಷ್ಟು ಇದ್ದಾ ಪ್ರದೇಶವು ೨೦೧೫–೧೬ರಲ್ಲಿ ಶೇ.೦.೮೮ರಷ್ಟು ಇದೆ ಅಂದರೆ ಸುಮಾರು ಪ್ರತಿಶತ ಶೇ.೦.೨ರಷ್ಟು ಭಾಗ ಪ್ರದೇಶವು ಇಳಿಕೆಯನ್ನು ಕಂಡಿದೆ ಹಾಗೆ ಉತ್ಪಾದನೆ ಮತ್ತು ಇಳುವರಿಯ ಪ್ರಮಾಣವನ್ನು ಗಮನಿಸಿದರೆ ಶೇ.೦.೬೬ರಷ್ಟು ಮತ್ತು ೭೭೪ರಷ್ಟು ಇದ್ದು ೨೦೧೫–೧೬ರಲ್ಲಿ ಶೇ.೦.೭೬ ಮತ್ತು ೯೧೦ರಷ್ಟು ಅಂದರೆ ತಂಬಾಕು ಬೆಳೆಯಲ್ಲಿ ಪ್ರದೇಶ, ಉತ್ಪಾದನೆ ಮತ್ತು ಇಳುವರಿ ಮೂರರಲ್ಲಿ ಸಮಾನವಾಗಿ ಇಳಿಕೆಯನ್ನು ಕಂಡಿದೆ. ಹಾಗೆ ತೆಂಗು ಬೆಳೆಯನ್ನು ೨೦೧೦ರಲ್ಲಿ ಶೇ.೪.೩೭ರಷ್ಟು ಇದ್ದಾ ಪ್ರದೇಶವು ೨೦೧೫–೧೬ರಲ್ಲಿ ಶೇ.೬.೧೦ರಷ್ಟು, ಹಾಗೆ ಉತ್ಪಾದನೆ ಮತ್ತು ಇಳುವರಿಯ ಪ್ರಮಾಣವನ್ನು ಗಮನಿಸಿದರೆ ಶೇ.೩೪೭೨.೪೯ರಷ್ಟು ಮತ್ತು ೮೦೧೯ರಷ್ಟು ಇದ್ದು ೨೦೧೫–೧೬ರಲ್ಲಿ ಶೇ.೯೮೨.೪೬ ಮತ್ತು ೮೨೪೭ರಷ್ಟು ಇದೆ. ಮೆಣಸಿನಕಾಯಿ ಬೆಳೆಯು ೨೦೧೦ರಲ್ಲಿ ಶೇ.೧.೨೭ರಷ್ಟು ಇದ್ದಾ ಪ್ರದೇಶವು ೨೦೧೫–೧೬ರಲ್ಲಿ ಶೇ.೧.೭೩ರಷ್ಟು, ಹಾಗೆ ಉತ್ಪಾದನೆ ಮತ್ತು ಇಳುವರಿಯ ಪ್ರಮಾಣವನ್ನು ಗಮನಿಸಿದರೆ ಶೇ.೨.೭೬ರಷ್ಟು ಮತ್ತು ೨೨೮೨ರಷ್ಟು ಇದ್ದು ೨೦೧೫–೧೬ರಲ್ಲಿ ಶೇ.೨.೫೭ ಮತ್ತು ೧೫೬೧ರಷ್ಟು ಇದೆ. ಒಟ್ಟಾರೆಯಾಗಿ ಪ್ರಮುಖ ಐದು ಬೆಳೆಗಳ ವಿಸ್ತೀರ್ಣ, ಉತ್ಪಾದನೆ ಮತ್ತು ಇಳುವರಿಯಲ್ಲಿ ಇಳಿಕೆಯನ್ನು ಕಂಡಿವೆ ಎಂದು ಈ ವರದಿಯಿಂದ ತಿಳಿದು ಬರುತ್ತದೆ ಈ ಬೆಳೆಗಳ ಸುಧಾರಣೆಗೆ ಸರಕಾರವು ಗಮನಿಸುವುದು ಅಗತ್ಯ.

ಕರ್ನಾಟಕದ ಆರ್ಥಿಕತೆಯು ಕರ್ನಾಟಕ ಕೃಷಿಯ ಅತ್ಯಂತ ಅಗತ್ಯ ಗುಣಲಕ್ಷಣಗಳಲ್ಲಿ ಒಂದಾಗಿದೆ. ಮಣ್ಣಿನ ಪರಿಸ್ಥಿತಿಗಳು ಮತ್ತು ಹವಾಮಾನವು ಕರ್ನಾಟಕದ ವಾಣಿಜ್ಯ ಬೆಳೆಗಳನ್ನು ಬೆಳೆಯುವಲ್ಲಿ ಜಂಟಿಯಾಗಿ ಕೊಡುಗೆ ನೀಡುತ್ತದೆ. ಕರ್ನಾಟಕದ ಜನರಿಗೆ ಕೃಷಿಯನ್ನು ಮುಖ್ಯ ಉದ್ಯೋಗವೆಂದು ಪರಿಗಣಿಸಲಾಗಿದೆ. ಕರ್ನಾಟಕದಲ್ಲಿ ಬಹುಪಾಲು ಜನರು ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುತ್ತಿದ್ದು ಅವರ ಪ್ರಧಾನ ವೃತ್ತಿಯು ಕೃಷಿಯೇ ಆಗಿದೆ. ಕರ್ನಾಟಕದ ಒಟ್ಟು ಭೂಮಿಯಲ್ಲಿ ಕೃಷಿ

ವಿಸ್ತೀರ್ಣ ೬೪.೬ ಪ್ರತಿಶತ ಆದರೆ ಕರ್ನಾಟಕವು ಸುಮಾರು ೧೨.೩೧ ಮಿಲಿಯನ್ ಹೆಕ್ಟೇರ್‌ಗಳನ್ನು ಆಕ್ರಮಿಸಿಕೊಂಡಿದೆ. ೨೦೦೦–೦೧ ರಿಂದ ೨೦೧೦–೧೧ಕ್ಕೆ ಹೋಲಿಸಿದರೆ ರೈತರು ಮತ್ತು ಕೃಷಿ ಕಾರ್ಮಿಕರ ಉದ್ಯೋಗವು ಶೇಕಡಾ ೭೧ರಷ್ಟಿತ್ತು. ಕರ್ನಾಟಕವನ್ನು ಮುಖ್ಯವಾಗಿ ಮೂರು ಋತುಗಳಲ್ಲಿ ಕೃಷಿಯನ್ನು ಮಾಡಲಾಗುತ್ತದೆ ಅವು ೧. ಖಾರಿಫ್ ಕರ್ನಾಟಕದಲ್ಲಿ ಮೂರು ಹವಮಾನ ಆಧಾರಿತವಾಗಿ ಬೆಳೆಗಳನ್ನು ಬೆಳೆಯುತ್ತಿದ್ದು ಅವು ೧. ರಬಿ ಬೆಳೆಗಳು ೩. ಬೇಸಿಗೆ ಬೆಳೆಗಳು ೩. ಖಾರಿಫ್ ಬೆಳೆಗಳು ಎಂದು ವಿಂಗಡಿಸಲಾಗಿದೆ.

ಕರ್ನಾಟಕದಲ್ಲಿ ಖಾರಿಫ್ ಬೆಳೆಗಳು ರಾಗಿ, ಭತ್ತ, ಜೋಳ (ದ್ವಿದಳ ಧಾನ್ಯಗಳು), ಕಡಲೆಕಾಯಿ, ಕೆಂಪು ಮೆಣಸಿನಕಾಯಿಗಳು, ಹತ್ತಿ, ಸೋಯಾಬೀನ್, ಕಬ್ಬು, ಅಕ್ಕಿ ಮತ್ತು ಅರಿಶಿನ. ಖಾರಿಫ್ ಬೆಳೆಗಳ ತಿಂಗಳಲ್ಲಿ ಏಪ್ರಿಲ್ ನಿಂದ ಸೆಪ್ಟೆಂಬರ್ ವರೆಗೆ. ೨. ರಾಬಿ ಬೆಳೆಗಳು: ಕರ್ನಾಟಕದ ಪ್ರಮುಖ ರಬಿ ಬೆಳೆಗಳಲ್ಲಿ ಗೋಧಿ, ಬಾರ್ಲಿ, ಸಾಸಿವೆ, ಎಳ್ಳು ಮತ್ತು ಬಟಾಣಿ. ಇದು ಕರ್ನಾಟಕದ ಭಾಗಗಳಲ್ಲಿ ಸುಗ್ಗಿ ಎಂದು ಹೆಚ್ಚು ಜನಪ್ರಿಯವಾಗಿದೆ. ರಬಿ ಬೆಳೆಗಳು ಅಕ್ಟೋಬರ್ ನಿಂದ ಡಿಸೆಂಬರ್ ತಿಂಗಳಿನಲ್ಲಿ. ಪ್ರಮುಖ ಬೆಳೆಗಳು ಕೃಷಿಗೆ ಅತ್ಯಂತ ಸೂಕ್ತವಾದ ಬೆಳೆಯುವ ಪ್ರಮುಖ ಬೆಳೆಗಳಲ್ಲಿ ಧಾನ್ಯಗಳು: ಅಕ್ಕಿ, ಜೋಳ, ಬಜಾರ್, ಜೋಳ, ಗೋಧಿ, ರಾಗಿ ಮತ್ತು ಸಣ್ಣ ರಾಗಿ. ಬೇಳೆಕಾಳುಗಳು: ತೋಗರಿ, ಬಟಾಣಿ, ಹೆಸರುಕಾಳು, ಗೋವಿನಜೋಳ ಇತ್ಯಾದಿ. ಈಶಾನ್ಯ ಕರ್ನಾಟಕ ಬೆಳೆಗಾರರು ನಗದು ಬೆಳೆಗಳಿಗೆ ಆದ್ಯತೆ ನೀಡುತ್ತಿದ್ದಾರೆ ಮುಖ್ಯವಾಗಿ ಕಬ್ಬು, ಹತ್ತಿ, ಮೆಕ್ಕೆಜೋಳ, ಒಣ ಮೆಣಸಿನಕಾಯಿ, ತೆಂಗು, ಅಡಿಕೆ, ಮೆಣಸು, ಏಲಕ್ಕಿ ಮತ್ತು ತಂಬಾಕು ಮುಂತಾದ ಬೆಳೆಗಳನ್ನು ಬೆಳೆಯುತಿದ್ದಾರೆ

**ಉತ್ಪಾದಕರಿಗೆ ಕೃಷಿ ಮಾರುಕಟ್ಟೆಯ ಅವಶ್ಯಕತೆ**

ಕೃಷಿಕನಿಗೆ ಮಾರುಕಟ್ಟೆಯು ಅತ್ಯಂತ ಪ್ರಮುಖವಾದಂತಹ ಘಟ್ಟವಾಗಿರುತ್ತದೆ. ರೈತ ಬೆಳೆದಂತಹ ಬೆಳೆಗೆ ಯೋಗ್ಯವಾದಂತಹ ಮತ್ತು ವ್ಯವಸ್ಥಿತವಾದಂತಹ ಮಾರುಕಟ್ಟೆಯು ದೊರೆತಾಗ ಮಾತ್ರ ರೈತನು ಆರ್ಥಿಕವಾಗಿ ಸಭಲನಾಗಲು ಸಾಧ್ಯವಾಗುತ್ತದೆ ಏಕೆಂದರೆ ರೈತನು ಶ್ರಮವಹಿಸಿ ಬೆಳೆದಂತಹ ಬೆಳೆಗಳಿಗೆ ಕೃಷಿ ಉತ್ಪನ್ನಗಳಿಗೆ ಸುವ್ಯವಸ್ಥಿತವಾದ ಕೃಷಿ ಮಾರುಕಟ್ಟೆಗಳು ಅತ್ಯಾವಶ್ಯಕವಾಗಿದೆ. ಜೀವನಾವಶ್ಯಕವಾದ ಕೃಷಿ ಉತ್ಪನ್ನಗಳು ಉತ್ಪಾದಕರಿಂದ ಗ್ರಾಹಕರಿಗೆ ತಲುಪಬೇಕಾದರೆ ಮಾರುಕಟ್ಟೆಗಳ ಅಗತ್ಯತೆ ಇದೆ. ಏಕೆಂದರೆ, ರೈತರು ತಾವು ಕಷ್ಟಪಟ್ಟು ಬೆಳೆದ ಉತ್ಪನ್ನಗಳಿಗೆ ಹೆಚ್ಚಿನ ಪ್ರತಿಫಲವನ್ನು ಮಾರುಕಟ್ಟೆಗಳಿಂದ ನಿರೀಕ್ಷಿಸುತ್ತಾರೆ. ಹಾಗಾಗಿ, ಸುವ್ಯವಸ್ಥಿತ ಮಾರುಕಟ್ಟೆಗಳು ಅವಶ್ಯವಾಗಿದೆ.

ನಮ್ಮ ರೈತರು ಸಾಲದಲ್ಲೇ ಹುಟ್ಟಿ ಸಾಲದಲ್ಲೇ ಸಾಯುತ್ತಾರೆ ಏಕೆಂದರೆ ರೈತರಿಗೆ ಹಣ ಅವಶ್ಯವಿರುವ ಸಂದರ್ಭದಲ್ಲಿ ತಕ್ಷಣ ತಮ್ಮ ಉತ್ಪನ್ನಗಳನ್ನು ಅವರ ಸ್ಥಳದಲ್ಲಿಯೇ ಕಡಿಮೆ ಬೆಲೆಗೆ ಮಾರುವ ಸ್ಥಿತಿಯಲ್ಲಿರುತ್ತಾರೆ. ಒಂದು ವೇಳೆ ಅವರ ಉತ್ಪನ್ನಗಳನ್ನು ಪಟ್ಟಣಕ್ಕೆ ಸಾಗಿಸಿಕೊಂಡು ಹೋದರೆ ಸಾರಿಗೆ ವೆಚ್ಚ, ಉಗ್ರಾಣದ ಸಮಸ್ಯೆ, ಬೆಲೆಗಳ ಅಸ್ಥಿರತೆ ಮತ್ತು ತಾನು ಮೋಸ ಹೋಗಬಹುದೆಂಬ ಹೆದರಿಕೆಯಿಂದ ಹಳ್ಳಿಗಳಲ್ಲಿಯೇ ಕಡಿಮೆ ಬೆಲೆಗೆ ಮಾರಾಟ ಮಾಡುವರು. ಹಾಗಾಗಿ, ರೈತರನ್ನು ಇಂತಹ ನಷ್ಟದಿಂದ ಪಾರು ಮಾಡಲು ಇರುವ ಒಂದೇ ಮಾರ್ಗವೆಂದರೆ, ಸುವ್ಯವಸ್ಥಿತವಾದ ಮಾರುಕಟ್ಟೆಗಳು, ಹಳ್ಳಿಯ ರೈತನ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ದೊರೆಯುವಂತಾಗಲು ಸುವ್ಯವಸ್ಥಿತವಾದ ಮಾರುಕಟ್ಟೆಗಳನ್ನು ಏರ್ಪಡಿಸುವುದು

ಅಗತ್ಯವಾಗಿದೆ. ಬೆಳೆದಂತಹ ಬೆಳೆಗಳನ್ನು ಮಾರಲು ರೈತರು ಮುಖ್ಯವಾಗಿ ಮಾರುಕಟ್ಟೆಗಳನ್ನೇ ಅವಲಂಬಿಸಿದ್ದಾರೆ. ಅದಕ್ಕಾಗಿ ಸರಕಾರವು ಹೀಗಾಗಲೆ ಹಲವು ರೀತಿಯ ಕೃಷಿ ಮಾರುಕಟ್ಟೆ ಆಧಾರಿತ ಯೋಜನೆಗಳನ್ನು ಮಾಡಿದೆಯಾದರು ಆ ಯೋಜನೆಗಳು ಸಮರ್ಪಕವಾಗಿ ರೈತರಿಗೆ ತಲುಪಿದೆಯೇ ಎಂದು ತಿಳಿಯುವುದು ಮುಖ್ಯ.

ಕೃಷಿ ಮಾರುಕಟ್ಟೆಯ ಸಮರ್ಪಕವಾದ ನಿರ್ವಹಣೆಗೆ ಜಾಗತಿಕ ಮಟ್ಟದಲ್ಲಿ ಕಾಲಕಾಲಕ್ಕೆ ಅನೇಕ ನಿಯಮಾವಳಿ, ಕಾಯಿದೆ ಮತ್ತು ಕಾನೂನುಗಳನ್ನು ಜಾರಿಗೊಳಿಸಲಾಗಿದೆ. ಕೃಷಿ ಮಾರುಕಟ್ಟೆಗೆ ಸಂಬಂಧಿಸಿದಂತೆ ಎಪಿಎಂಸಿಯ ಕಾನೂನುಗಳನ್ನು ಸಂದರ್ಭಕ್ಕೆ ಅನುಗುಣವಾಗಿ ತಿದ್ದುಪಡಿ ಮಾಡಲಾಗಿತ್ತು. ಆದರೆ, ನಂತರದಲ್ಲಿ ಅವುಗಳನ್ನು ಹಿಂಪಡೆಯಲಾಯಿತು. ಅನೇಕ ರೀತಿಯಲ್ಲಿರುವ ಕೃಷಿ ಮಾರುಕಟ್ಟೆಯ ಆಂತರಿಕ ಅಥವಾ ಬಾಹ್ಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಕಾಯಿದೆಗಳನ್ನು ಅಥವಾ ನಿಯಮಾವಳಿಗಳನ್ನು ರೂಪಿಸಲಾಗಿದ್ದರೂ ಸಹ ಮಾರುಕಟ್ಟೆಯು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಕೃಷಿ ಮಾರುಕಟ್ಟೆಗೆ ಸಂಬಂಧಿಸಿದಂತೆ ದೇಶದಲ್ಲಿ ಹಲವಾರು ಯೋಜನೆಗಳು, ಕಾಯಿದೆಗಳನ್ನು ಸರ್ಕಾರ ಜಾರಿಗೊಳಿಸಿದ್ದು, ಕೇವಲ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಿದರೆ ಸಾಲದು ಅವು ಎಷ್ಟರ ಮಟ್ಟಿಗೆ ಪ್ರಯೋಜನಕಾರಿಯಾಗಿ ಕಾರ್ಯ ನಿರ್ವಹಿಸುತ್ತಿವೆ ಎನ್ನುವುದು ಮುಖ್ಯವಾಗುತ್ತದೆ. ಹಾಗಾಗಿ, ಕೇವಲ ಯೋಜನೆಗಳು ಅಥವಾ ಕಾಯಿದೆಗಳ ಜಾರಿಯೊಂದೇ ಕೃಷಿ ಮಾರುಕಟ್ಟೆಯ ಸಮಸ್ಯೆಗಳಿಗೆ ಪರಿಹಾರವಲ್ಲ.

ವಿವಿಧ ರೀತಿಯ ವಾಣಿಜ್ಯ ಬೆಳೆಗಳನ್ನು ಬೆಳೆಯಲಾರಂಭಿಸಿದಂತೆಲ್ಲಾ ಕೃಷಿ ಕ್ಷೇತ್ರಕ್ಕೆ ಯೋಗ್ಯವಾದ ಮಾರುಕಟ್ಟೆಯ ಅವಶ್ಯಕತೆ ಕಂಡು ಬಂದಿತು. ದೇಶದ ಅರ್ಥವ್ಯವಸ್ಥೆಯಲ್ಲಿ ಕೃಷಿಗೆ ಪ್ರಮುಖವಾದ ಸ್ಥಾನ ನೀಡಲಾಗಿದೆ ಎಂದರೂ ಸಹ ಕೈಗಾರಿಕಾ ಉತ್ಪನ್ನಗಳಂತೆ ಕೃಷಿ ಉತ್ಪನ್ನವನ್ನು ಸಮಾನಾಂತರವಾಗಿ ನೋಡಲಾಗುತ್ತಿಲ್ಲ. ಅಂದರೆ, ಕೃಷಿ ಉತ್ಪನ್ನಗಳಿಗೆ ತಕ್ಕಂತೆ ಸರಿಯಾದ ಬೆಲೆ ದೊರಕದೆ ಇರುವುದರಿಂದ ಕೃಷಿ ಮಾರುಕಟ್ಟೆಯ ಸಮಸ್ಯೆಗಳು ಹೆಚ್ಚಾಗುತ್ತಿವೆ. ಕೃಷಿ ಮಾರುಕಟ್ಟೆಯ ಕಾಯಿದೆಗಳು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹಾಗೂ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಬೇರೆ–ಬೇರೆಯಾಗಿದ್ದು, ರೈತರ ಉತ್ಪನ್ನಗಳಿಗೆ ಯೋಗ್ಯ ಬೆಲೆಯನ್ನು ದೊರಕಿಸಿಕೊಡಲು ಕೃಷಿ ಮಾರುಕಟ್ಟೆಗಳು ಪ್ರಯತ್ನಿಸುತ್ತಿವೆ.

**ಉಪಸಂಹಾರ**

ಕರ್ನಾಟಕದಲ್ಲಿ ರೈತನು ಆರ್ಥಿಕವಾಗಿ ಸಬಲರಾಗಬೇಕಾದರೆ ಅವರು ವಾಣಿಜ್ಯ ಕೃಷಿಯನ್ನು ಅನುಸರಿಸುವುದು ಮುಖ್ಯ. ವಾಣಿಜ್ಯ ಕೃಷಿಯು ಜೀವನಾಧಾರ ಕೃಷಿಯಿಂದ ಗಮನಾರ್ಹವಾಗಿ ಭಿನ್ನವಾಗಿದೆ. ಏಕೆಂದರೆ ವಾಣಿಜ್ಯ ಕೃಷಿಯ ಮುಖ್ಯ ಉದ್ದೇಶವು ಆರ್ಥಿಕತೆ, ಬಂಡವಾಳ ತೀವ್ರ, ಕೃಷಿ ತಂತ್ರಗಳ ಪರಿಚಯ, ಕಾರ್ಮಿಕ ಉಳಿತಾಯ, ತಂತ್ರಜ್ಞಾನಗಳು ಸಂಶ್ಲೇಷಿತ, ಮತ್ತು ನೈಸರ್ಗಿಕತೆಯ ಮೂಲಕ ಕೃಷಿ ಭೂಮಿಯಲ್ಲಿ ಬೆಳೆ ಇಳುವರಿಯನ್ನು ಗರಿಷ್ಟಗೊಳಿಸುವುದರ ಮೂಲಕ ಹೆಚ್ಚಿನ ಲಾಭವನ್ನು ಸಾಧಿಸುವುದು. ಸಂಪನ್ಮೂಲಗಳು ಜೀವನಾಧಾರ ಕೃಷಿಯ ಆರ್ಥಿಕ ಮಾದರಿಯಾಗಿದ್ದು ಇದು ಹೆಚ್ಚು ಜನರಿಗೆ ಕೆಲಸವನ್ನು ಒದಗಿಸುವ ಮತ್ತು ಆಕರ್ಷಿಸುವಂತೆ ಮಾಡುತ್ತದೆ. ಇದರಿಂದ ನಮ್ಮ ದೇಶದ ಆರ್ಥಿಕ ಪ್ರಗತಿ, ನಿರುದ್ಯೋಗ, ಮತ್ತು ಆಹಾರ ಸಮಸ್ಯೆಯನ್ನು ಸಂಪೂರ್ಣವಾಗಿ ಕಡಿಮೆ ಮಾಡಲು ಸಾಧ್ಯ. ಒಟ್ಟಾರೆಯಾಗಿ ಹೇಳುವುದಾದರೆ

ವಾಣಿಜ್ಯೀಕರಣದ ಉದ್ದೇಶದಿಂದ ರೈತನು ಆರ್ಥಿಕವಾಗಿ ಮತ್ತು ಸಮಾಜಿಕವಾಗಿ ಅಭಿವೃದ್ಧಿ ಹೊಂದಲು ಸಾಧ್ಯ.

**ಕೊನೆ ಟಿಪ್ಪಣಿ**


೧. ಕರ್ನಾಟಕದ ಆರ್ಥಿಕ ಸಮಿಕ್ಷೆ ೨೦೨೧–೨೨, ಪು.ಸ ೧೭.

೨. ಕರ್ನಾಟಕ ಸರ್ಕಾರದ ಕೃಷಿ ಮತ್ತು ಆಹಾರ ನಿರ್ವಹಣೆ ಕೈಪಿಡಿ ೨೦೨೦–೨೧.

೩. ದಿ ಎಕನಾಮಿಕ ಸರ್ವೇ ಆಫ್ ಕರ್ನಾಟಕ, ೨೦೨೦–೨೧.

೪. ಮೌಸಾವಿ ಸಯಿದ್, "ಗ್ರೋಥ್ ಆಫ್ ಅಗ್ರಿಕಲ್ಚರ್ ಎಕ್ಸ್ಪೋರ್ಟ್ ಇನ್ ಇಂಡಿಯಾ", ಮೈಸೂರು ವಿಶ್ವವಿದ್ಯಾಲಯ, ಅಕ್ಟೋಬರ್ (೨೦೧೫). ಪು.ಸಂ ೯೬.

೫. ಜೆ.ಕೆ.ಸಚಿದೇವ, (೨೦೦೫). "ಡೈರೆಕ್ಷನ್ ಎಕ್ಸ್ಪೋರ್ಟ್ ಆಫ್ ಕಮರ್ಷಿಯಲ್ ಅಗ್ರಿಕಲ್ಚರ್ ಕಮಾಡಿಟಿಸ್", ಜರ್ನಲ್ ಆಫ್ ಗ್ಲೋಬಲ್ ಎಕಾನಮಿ ರಿಸರ್ಚ್ ಸೆಂಟರ್ ಫಾರ್ ಸೋಶಿಯಲ್ ಸೈನ್ಸಸ್, ಮುಂಬೈ, ಇಂಡಿಯಾ, ಸಂಪುಟ ೧(೩).